ತಕ್ಷಣ ಬಿಡುಗಡೆಗಾಗಿ

# ವಿಶ್ವಬ್ಯಾಂಕ್

ಸಂಪರ್ಕಗಳಿಗಾಗಿ: ದೆಹಲಿಯಲ್ಲಿ: ಗೀತಾಂಜಲಿ ಛೋಪ್ರಾ (91-11) 51479286
ಇ-ಮೈಲ್: gchopra@worldbank.org
ವಾಷಿಂಗ್‌ಟನ್‌ನಲ್ಲಿ: ಕರೀನಾ ಮಾನಸೇ  (202) 473-1729
ಇ-ಮೈಲ್: :  kmanasseh@worldbank.org

## ಭಾರತದಲ್ಲಿ ಸುನಾಮಿ ಪೀಡಿತ ಪ್ರದೇಶಗಳಲ್ಲಿ ತುರ್ತು ಪುನಾರಚನೆಗಾಗಿ ವಿಶ್ವಬ್ಯಾಂಕ್‌ನಿಂದ ಬೆಂಬಲ

### ತಮಿಳುನಾಡು ಮತ್ತು ಪಾಂಡಿಚೇರಿಯಲ್ಲಿ ವಸತಿ ನಿರ್ಮಾಣ ಮತ್ತು ಜೀವನೋಪಾಯಗಳ ಪುನರ್ ಸ್ಥಾಪನೆಗೆ ವಿಶ್ವಬ್ಯಾಂಕ್ ಕ್ರೆಡಿಟ್‌ನಿಂದ ಹಣಕಾಸು ಪೂರೈಕೆ

ವಾಷಿಂಗ್‌ಟನ್, ಮೇ 3, 2005: ತಮಿಳುನಾಡು ಮತ್ತು ಪಾಂಡಿಚೇರಿಯಲ್ಲಿ ಡಿಸೆಂಬರ್ 2004ರಲ್ಲಿ ಸಂಭವಿಸಿದ ಏಶಿಯಾ ಸುನಾಮಿಯಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕಿದ ಪ್ರದೇಶಗಳಲ್ಲಿ ಪುನಾರಚನೆ ಮತ್ತು ಪುನರ್ವಸತಿ ಪ್ರಯತ್ನಗಳಿಗಾಗಿ ಭಾರತಕ್ಕೆ ಇಂದು ವಿಶ್ವಬ್ಯಾಂಕಿನಿಂದ 465 ಮಿಲಿಯ ಡಾಲರುಗಳ ಸಾಲ ದೊರೆತಿದೆ. ಇದು, ಭಾರತದಲ್ಲಿ ಸುನಾಮಿ ಪುನರ್ವಸತಿ ಕೆಲಸಗಳಿಗಾಗಿ ವಿಶ್ವಬ್ಯಾಂಕ್‌ನ ಒಟ್ಟು ಬೆಂಬಲ 528.5 ಮಿಲಿಯ ಡಾಲರುಗಳ ಒಂದು ಭಾಗ.

ತುರ್ತು ಸುನಾಮಿ ಪುನಾರಚನೆ ಯೋಜನೆಯು, ತಮಿಳುನಾಡು ಹಾಗೂ ಪಾಂಡಿಚೇರಿಯಲ್ಲಿ ಹಾನಿಗೊಳಗಾದ 140,000 ಮನೆಗಳ ದುರಸ್ತಿ ಅಥವಾ ಪುನರ್ ನಿರ್ಮಾಣಕ್ಕೆ ಸಹಾಯ ಒದಗಿಸಬಹುದೆಂದು ಅಂದಾಜು ಮಾಡಲಾಗಿದೆ. ಸಾರ್ವಜನಿಕ ಕಟ್ಟಡಗಳ ಪುನರ್‌ನಿರ್ಮಾಣಕ್ಕೆ ಹಾಗೂ ಮೀನುಗಾರಿಕೆ ಮತ್ತು ಕೃಷಿಕ್ಷೇತ್ರದಲ್ಲಿ ಜೀವನೋಪಾಯದ ಜೀರ್ಣೋದ್ಧಾರ ಹಾಗೂ ವಸತಿಗಳ ಪುನಾರಚನೆ ಮತ್ತು ಕರಾವಳಿ ನಿರ್ವಹಣೆಯಲ್ಲಿ ಸಾಮರ್ಥ್ಯ ವರ್ಧನೆಗೆ ಸಹಾಯ ಒದಗಿಸಲಿದೆ. ಅದಕ್ಕಿಂತಲೂ ಪ್ರಮುಖವಾಗಿ,  ಸುಲಭದಲ್ಲಿ ಹಾನಿಗೊಳಗಾಗಬಹುದಾದ ಕಡೆ ನಿರ್ಮಾಣ ಕಾರ್ಯಗಳನ್ನು ಮಾಡಬಾರದೆಂಬ ಸರಕಾರದ ನಿಲುವನ್ನು ಈ ಯೋಜನೆ ಪರಿಗಣಿಸುತ್ತದೆ.

ಡಿಸೆಂಬರ್ 26, 2004ರಂದು, ರಿಚರ್‌ಮಾಪನದಲ್ಲಿ 0.9 ಆಳತೆಯ ಭೂಕಂಪವುಂಟಾಗಿ, ಭಾರತ, ಶ್ರೀಲಂಕ, ಥೈಲ್ಯಾಂಡ್, ಇಂಡೋನೇಶಿಯಾ, ಮಾಲ್ಡೀವ್ಸ್ ಸೇರಿದಂತೆ ಹಲವಾರು ದೇಶಗಳ ಕರಾವಳಿ ಪ್ರದೇಶಗಳಲ್ಲಿ ತೀವ್ರ ಹಾನಿಯೊದಗಿದೆ. ಭಾರತದಲ್ಲಿ, ಅಂಡಮಾನ್ ನಿಕೋಬಾರ್ ದ್ವೀಪ ಹಾಗೂ ಆಂಧ್ರಪ್ರದೇಶ, ಕೇರಳ, ತಮಿಳುನಾಡು ಮತ್ತು ಕೇಂದ್ರಾಡಳಿತ ಪ್ರದೇಶವಾದ ಪಾಂಡಿಚೇರಿಯ ಸುಮಾರು 2260 ಕಿ.ಮೀ. ಉದ್ದದ ಕರಾವಳಿ ಪ್ರದೇಶದಲ್ಲಿ ವಿಪರೀತ ಕಷ್ಟ–ನಷ್ಟ  ಸಂಭವಿಸಿದೆ. ಸುಮಾರು 2.7 ಮಿಲಿಯ ಜನರು ಈ ವಿಪತ್ತಿಗೆ ಒಳಗಾಗಿದ್ದಾರೆ. ಇವರಲ್ಲಿ ಹೆಚ್ಚಿನವರು (ಶೇಕಡ 80) ಮೀನುಗಾರರು. ಇನ್ನುಳಿದವರಲ್ಲಿ ಕೃಷಿಕರು (ಶೇಕಡ 15) ಹಾಗೂ ಸಣ್ಣ ವ್ಯಾಪಾರಿಗಳು (ಶೇಕಡ 5). ಈ ವಿಪತ್ತಿನಿಂದಾಗಿ ಈ ಮೊದಲೇ ಬಡತನದಲ್ಲಿದ್ದ ಕರಾವಳಿ ಸಮುದಾಯಗಳ ಮೇಲೆ ಹೆಚ್ಚಿನ ದುಷ್ಪರಿಣಾಮ ಬೀರಿದೆ.

“ ಜೀವ ಹಾನಿ ಹಾಗೂ ವಿಶೇಷವಾಗಿ ಬಡವರ ಮೇಲಾದ ಸಾಮಾಜಿಕ ಮತ್ತು ಆರ್ಥಿಕ ಸಂಕಷ್ಟವನ್ನು ಯಾವ ಹಣ ಸಹಾಯವೂ ಪರಿಹರಿಸಲಾರದು” ಎನ್ನುತ್ತಾರೆ ಭಾರತದ ವಿಶ್ವಬ್ಯಾಂಕ್ ಕಂಟ್ರೀ ಡೈರೆಕ್ಟರ್ ಶ್ರೀ ಮೈಕೆಲ್ ಕಾರ್ಟ್ರ್. “ಬ್ಯಾಂಕ್, ಭಾರತ ಸರಕಾರದೊಂದಿಗೆ ಹಾಗೂ ಇತರ ಅಭಿವೃದ್ಧಿ ಸಹಯೋಗಿಗಳೊಂದಿಗೆ ಸನಿಹದಿಂದ ಕೆಲಸಮಾಡುತ್ತಿದ್ದು, ಅಭಿವೃದ್ಧಿಯ ಎಲ್ಲ ಅಂಶಗಳನ್ನು ಒಳಗೊಂಡು ಮತ್ತೆ ಅಪಾಯದ ಸ್ಥಿತಿಗೆ ಸಿಲುಕದಂತೆ ಮಾಡುವ ಯೋಜನೆಗಳನ್ನು ಕಾರ್ಯರೂಪಕ್ಕೆ ತರುತ್ತಿದೆ.”

ಈ ಯೋಜನೆ 5 ಅಂಶಗಳನ್ನು ಒಳಗೊಂಡಿದೆ:

- **ವಸತಿ:** ತಾತ್ಕಾಲಿಕ ವಸತಿ ಒದಗಿಸುವುದಕ್ಕೆ ಹಾಗೂ ಅಂತಹ ಸ್ಥಳಗಳಲ್ಲಿ ತಾತ್ಕಾಲಿಕ ಸೇವೆಗಳನ್ನು ಊರ್ಜಿತಗೊಳಿಸುವ ಸಲುವಾಗಿ ಈ ಅಂಶ ಹಣಕಾಸು ಒದಗಿಸುತ್ತದೆ. ಈಗಿರುವ ಮನೆಗಳ ದುರಸ್ತಿ ಹಾಗೂ ಪುನರ್ ನಿರ್ಮಾಣ, ಹೊಸ ಮಬೆಗಳ ನಿರ್ಮಾಣ ಹಾಗೂ ಅಗತ್ಯದ ಸೇವೆಗಳು ಉತ್ತಮ ಸಮುದಾಯಿಕ ಮೂಲ ಸೌಲಭ್ಯಗಳು ಅಂದರೆ, ರಸ್ತೆ, ಒಳ ರಸ್ತೆಗಳು, ಜಲ ಪೂರೈಕೆ, ಶೌಚಾಲಯಗಳು, ಚರಂಡಿಗಳು, ವಿದ್ಯುತ್ತೀಕರಣ ಮತ್ತು ಸಮುದಾಯಿಕ ಮೂಲಸೌಲಭ್ಯಗಳು ಹಾಗೂ ಪೀಡಿತ ಕುಟುಂಬಗಳ ಪುನರ್ವಾಸಕ್ಕೂ ಈಅಂಶ ಹಣ ಒದಗಿಸುತ್ತದೆ.

- **ಜೀವನೋಪಾಯದ ಪುನರ್‌ನಿರ್ಮಾಣ:** ಪೀಡಿತರ ಜೀವನೋಪಾಯವನ್ನು ಮತ್ತೆ ಒದಗಿಸುವುದಕ್ಕೆ ಸಹಾಯ ಮಾಡಲು, ಹಾನಿಗೊಂಡ ಮೀನುಗಾರಿಕೆ ಮತ್ತು ಮೂಲ ಸೌಲಬ್ಯಗಳನ್ನು ಪುನರ್ ಸ್ಥಾಪಿಸಲು, ನಷ್ಟವಾದ ಕೃಷಿ ಹಾಗೂ ತೋಟಗಾರಿಕೆ ಭೂಮಿಯ, ಹಾಗೂ ಮೂಲ ಸೌಲಭ್ಯಗಳ ಜೀರ್ಣೋದ್ಧಾರಕ್ಕಾಗಿ ಹಣಕಾಸನ್ನು ಈ ಅಂಶದಲ್ಲಿ ಒದಗಿಸಲಾಗುವುದು. ಸಾರ್ವಜನಿಕ ಕಟ್ಟಡಗಳು ಮತ್ತು ಸಾರ್ವಜನಿಕ ಕೆಲಸಗಳು, ಅಂದರೆ, ಹಾನಿಗೊಳಗಾದ ಆಸ್ಪತ್ರೆಗಳು, ಸಾರ್ವಜನಿಕ ಆರೋಗ್ಯ ಕೇಂದ್ರಗಳು, ಉಪಕೇಂದ್ರಗಳು, ಶೈಕ್ಷಣಿಕ ಸಂಸ್ಥೆಗಳು, ಚಂಡಮಾರುತ ಸಂರಕ್ಷಣಾ ಕೇಂದ್ರಗಳು ಹಾಗೂ ಇತರ ಸಾರ್ವಜನಿಕ ಕಟ್ಟಡಗಳ ದುರಸ್ತಿ ಮತ್ತು ಪುನರ್‌ನಿರ್ಮಾಣದಂತಹ ಕೆಲಸಗಳಿಗಾಗಿ ಈ ಅಂಶದಲ್ಲಿ ಹಣಕಾಸು ಒದಗಿಸಲಾಗಿವುದು. ಹಾಳಾದ ಹೊಳೆ ಹಾಗೂ ಚರಂಡಿ ಕಟ್ಟೆಗಳ ಜೀರ್ಣೋದ್ಧಾರ ಹಾಗೂ ತಮಿಳುನಾಡಿನ ರಕ್ಷಣಾ ಪಟ್ಟಿಗಳು ಮತ್ತು ಮಾವಿನ ತೋಪುಗಳಲ್ಲಿ ಗಿಡಗಳನ್ನು ನೆಡುವುದಕ್ಕೂ ಸಹ ಈ ಅಂಶದಲ್ಲಿ ಹಣಕಾಸು ಒದಗಿಸಲಾಗುತ್ತದೆ.

- ತಾಂತ್ರಿಕ ನೆರವು ಹಾಗೂ ತರಬೇತಿ: ವಿಸ್ತೃತ ಯೋಜನಾ ವರದಿಗಳನ್ನು ತಯಾರಿಸುವುದು, ಭೂ–ನಿರ್ವಹಣೆಯ ಸೇವೆಗಳನ್ನು ಒದಗಿಸುವುದು, ನಿಗಾ ಇಡುವುದು, ಅಂದಾಜು ಮಾಡುವುದು ಹಾಗೂ ಪುನರ್ವಸತಿ ಬಡಾವಣೆಗಳನ್ನು ರೂಪಿಸುವುದು ಮತ್ತು ಅದಕ್ಕೆ ಸಂಬಂಧಿಸಿದ ಮೂಲ ಸೌಲಭ್ಯಗಳ ಯೋಜನೆಗಳನ್ನು ತಯಾರಿಸುವುದಕ್ಕೆ ಈ ಅಂಶದಲ್ಲಿ ನೆರವು ನೀಡಲಾಗುವುದು.

- **ಕಾರ್ಯಾನುಷ್ಠಾನ ಬೆಂಬಲ:** ಯೋಜನೆಯ ಅನುಷ್ಠಾನಕ್ಕೆ ಸಂಬಂಧಿಸಿದ ಯೋಜನಾ ನಿರ್ವಹಣೆ ಹಾಗೂ ಹೆಚ್ಚುವರಿ ಕಾರ್ಯನಿರ್ವಾಹಕ ಖರ್ಚು, ಅಂದರೆ, ಹಣಕಾಸು ಲೆಕ್ಕ ಪರಿಶೋಧನೆ, ಗುಣಮಟ್ಟ ಖಚಿತಪಡಿಸುವುದು, ತಾಂತ್ರಿಕ ಪರಿಶೋಧನೆ, ಯೋಜನೆಯ ಮೌಲ್ಯಮಾಪನ ಹಾಗೂ ನಿಗಾ ಇಡುವುದು ಮತ್ತು ಸಾಮಾಜಿಕ ಮತ್ತು ಪರಿಸರ ಮೇಲಣ ನಿರಂತರ ಪ್ರಭಾವವನ್ನು ತಿಳಿಯುವುದು ಸೇರಿದಂತೆ, ತಾಂತ್ರಿಕ ನೆರವು ಮತ್ತು ಸಾಮರ್ಥ್ಯವರ್ಧನೆಗಾಗಿ ಈ ಅಂಶದಲ್ಲಿ ಹಣ ಒದಗಿಸಲಾಗುತ್ತದೆ.

"ಪ್ರಸ್ತಾವಿತ ಯೋಜನೆಗಳ ಹಲವಾರು ಅಂಶಗಳು ಬಡವರಿಗೆ ನೇರವಾಗಿ ಪ್ರಯೋಜನ ದೊರಕಿಸುವುದಾರೂ ಸರಕಾರದ ಪುನಾರಚನೆ ಕಾರ್ಯಕ್ರಮದ ಒತ್ತು, ಈ ಸಂದರ್ಭವನ್ನು ಅಭಿವೃದ್ಧಿಯ ಅವಕಾಶವನ್ನಾಗಿ ಬಳಸಿಕೊಳ್ಳುವುದಾಗಿದೆ." ಎನ್ನುತ್ತಾರೆ, ವಿಶ್ವಬ್ಯಾಂಕ್‌ನೊಂದಿಗಿರುವ ಹಿರಿಯ ಸ್ಯಾನಿಟರಿ ಇಂಜಿನಿಯರ್ ಶ್ಯಾಮಲಾಲ್ ಸರ್ಕಾರ್. "ಪೀಡಿತ ಜನರು ಹಾಗೂ ಸುಲಭದಲ್ಲಿ ತೊಂದರೆಗೊಳಗಾಗಬಹುದಾದ ಕರಾವಳಿ ಜನಸಾಮಾನ್ಯರ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ಅವರಿಗೆ ಹೆಚ್ಚಿನ ಪ್ರಯೋಜನ ಒದಗಿಸುವ ನಿಟ್ಟಿನಲ್ಲಿ ಪುನಾರಚನೆ, ಪುನರ್ವಸತಿ ಕಾರ್ಯದಲ್ಲಿ ತೊಡಗಿದ ಎಲ್ಲ ಸಂಸ್ಥಗಳೊಂದಿಗೆ ವಿಶ್ವ ಬ್ಯಾಂಕ್ ನಿಕಟವರ್ತಿಯಾಗಿ ಕೆಲಸಮಾಡುತ್ತದೆ."

ಒಟ್ಟು ಯೋಜನಾ ಖರ್ಚು 682.8 ಮಿಲಿಯನ್ ಡಾಲರುಗಳು ಎಂದು ಅಂದಾಜು ಮಾಡಲಾಗಿದೆ. ಇದರಲ್ಲಿ ಐಡಿಎ ಹಣಕಾಸು 465.0 ಮಿಲಿಯ ಡಾಲರುಗಳ ಹಣಕಾಸು ಒದಗಿಸುತ್ತದೆ. ಅಂದರೆ ಒಟ್ಟು ಖರ್ಚಿನ ಶೇಕಡ 68ರಷ್ಟು. ಐಡಿಎ–ಯ ಸಾಮಾನ್ಯ ಷರತ್ತುಗಳು, ಸೇವಾ ಶುಲ್ಕ ಶೇಕಡಾ 0.75 ಸೇರಿರುತ್ತದೆ. 35 ವರ್ಷಗಳ ಮೆಚುರಿಟಿ ಅವಧಿ ಅನ್ವಯಿಸುತ್ತದೆ. ಉಳಿದ ಹಣವನ್ನು ಭಾರತ ಸರಕಾರ, ತಮಿಳುನಾಡು ಹಾಗೂ ಪಾಂಡಿಚೆರಿ ಸರಕಾರಗಳು ನೀಡಲಿವೆ.

ಈ ಯೋಜನೆ ಮಾತ್ರವಲ್ಲದೆ, ವಿಶ್ವ ಬ್ಯಾಂಕ್, ಸುನಾಮಿ ವಿಪತ್ತು ಪರಿಹಾರ ಚಟುವಟಿಕೆಗಳಿಗಾಗಿ 63.5 ಮಿಲಿಯ ಡಾಲರುಗಳ ಕೊಡುಗೆ ನೀಡಲಿದೆ. ಪ್ರಸ್ತುತ ಐಡಿಎ ಸಾಲಗಳು ಆಂಧ್ರಪ್ರದೇಶದಲ್ಲಿ (40 ಮಿಲಿಯ ಅಮೇರಿಕನ್ ಡಾಲರುಗಳು) ಅಗತ್ಯವಾದ ಪುನರ್ ನಿರ್ಮಾಣ

ಕಾರ್ಯಕ್ಕಾಗಿ ಹಾಗೂ ಕೇರಳದಲ್ಲಿ  ನೀರಿನ ಪೂರೈಕೆಗಾಗಿ (10 ಮಿಲಿಯ ಅಮೇರಿಕನ್ ಡಾಲರುಗಳು) ನೆರವು ನೀಡಲಿವೆ. ತಮಿಳುನಾಡಿನ ರಸ್ತೆ ವಲಯದ ಅಗತ್ಯ (11 ಮಿಲಿಯ ಅಮೇರಿಕನ್ ಡಾಲರುಗಳು) ಪ್ರಸ್ತುತ ಐಬಿಆರ್‌ಡಿ ಸಾಲ ಯೋಜನೆಯಲ್ಲಿ ಒಳಗೊಳ್ಳುವುದು. 2.5 ಮಿಲಿಯನ್ ಡಾಲರುಗಳ ಟ್ರಸ್ಟ್ ಫಂಡ್, ಸುನಾಮಿ ಪುನರ್ವಸತಿ ಕಾರ್ಯಾನುಷ್ಠಾನದ ಪೂರಕ ಕಾರ್ಯಕ್ರಮಗಳಿಗಾಗಿ ಬೆಂಬಲ ನೀಡಲಿದೆ.

ಅಂಡಮಾನ್ ಮತ್ತು ನಿಕೋಬಾರ್ ದ್ವೀಪ ಸಮೂಹದಲ್ಲಿ  ಪುನರ್ವಸತಿ–ಜೀರ್ಣೋದ್ಧಾರ ಪ್ರಯತ್ನಗಳಿಗೆ ಭಾರತ ಸರಕಾರ ನೇರವಾಗಿ ಹಣಕಾಸು ಒದಗಿಸುತ್ತಿದೆ.

ಭಾರತದಲ್ಲಿ ವಿಶ್ವಬ್ಯಾಂಕಿನ ಚಟುವಟಿಕೆ ಕುರಿತಂತೆ ಹೆಚ್ಚಿನ ಮಾಹಿತಿಗಾಗಿ ನೋಡಿ :

http://www.worldbank.org.in

ಈ ಯೋಜನೆಯಲ್ಲಿ ಹೆಚ್ಚಿನ ಮಾಹಿತಿಗಾಗಿ ನೋಡಿರಿ :

http://web.worldbank.org/external/projects/main?pagePK=104231&piPK=73230&theSitePK=40941&menuPK=228424&Projectid=P094513